

ರಸ್ತೆಯಲ್ಲಿ ಇಡೀ ಒಂದು ದಿನ ಪ್ರಯಾಣ ಮಾಡಬೇಕು. ಆದರೆ ಅಲ್ಲೀಗ ವಾತಾವರಣ ಏರುಪೇರಾಗಿ ಹಿಮಪಾತ ಶುರುವಾಗಿದೆ" ಎಂದು ಅಂಕಿತ್ ಹೆದರಿಸಿದ. ನಮ್ಮ ಐದು ದಿನಗಳ ಪ್ರವಾಸ ಆಗಲೇ ಮುಗಿಯಲು ಬಂದಿದ್ದು ನಾವು ಹೇಗೂ ತೊಲಗಿ ಹೋಗುವ ಗಿರಾಕಿಗಳು ಎಂಬುದು ಅವನಿಗೆ ಚೆನ್ನಾಗಿ ಗೊತ್ತಿತ್ತು. ಆಮೇಲೆ ಎಲ್ಲವೂ ಒಂದೇ ಸಲಕ್ಕೆ ತೋರಿಸಿಬಿಟ್ಟರೆ ಮತ್ತೆ ಇವರೆಲ್ಲಿ ಬರುತ್ತಾರೆ? ಮುಂದಿನ ವರ್ಷಕ್ಕಿಷ್ಟು ಬಾಕಿ ಉಳಿಸುವುದು ಸೂಕ್ತ ಎಂಬ ವ್ಯವಹಾರದ ದೂರದ ಫಾಯಿದೆಯನ್ನು ಆತ ಆಲೋಚಿಸಿರಬಹುದೆಂದು ನಾವು ತರ್ಕಿಸಿದೆವು.

"ಸಾಬ್ಜೀ ಇಲ್ಲಿ ಇಷ್ಟಪಟ್ಟ ಹಕ್ಕಿಗಳ ನೋಡಲು ಜನ ತಿಂಗಳಾನುಗಟ್ಟಲೆ ಕಾಯ್ತಾರೆ. ಪಟ ಪ್ರೇಮಿಗಳು ದಿನ, ವಾರ ಎಲ್ಲಾ ಮರೆತು ಇಲ್ಲಿ ಹುಡುಕುತ್ತಲೇ ಇರುತ್ತಾರೆ. ವರ್ಷದ ಎಲ್ಲಾ ಋತುಗಳಲ್ಲಿಯೂ ಇಲ್ಲಿಗೆ ಬಂದು ಹೋಗುವ ಹಕ್ಕಿಗಳು ಬದಲಾಗುತ್ತವೆ. ನನ್ನ ಪ್ರಕಾರ ನೀವು ಇನ್ನೂ ಹತ್ತು ಸಲವಾದರೂ ಬರಲೇಬೇಕು. ಒಂದೇ ಗುಕ್ಕಿಗೆ ಜೀವನದಲ್ಲಿ ಏನೂ ಸಿಗುವುದಿಲ್ಲ" ಎಂದು ಆತ ಚಾಲಾಕಿ ತತ್ವಜ್ಞಾನಿಯಾಗಿ ಮಾತಾಡಿದ. ನಾವು ನಮ್ಮೆಲ್ಲಾ ಆಸ್ತಿಪಾಸ್ತಿ ಮಾರಿಕೊಂಡು, ಹೆಂಡ್ತಿ ಮಕ್ಕಳು ಸಂಸಾರಗಳ ದಿವಾಳಿಯೆಬ್ಬಿಸಿ ಪೂರ್ಣಪ್ರಮಾಣದ ಅಲೆಮಾರಿಗಳಾಗಿ ಬಂದು ಇಲ್ಲೇ ಠಿಕಾಣಿ ಹೂಡಬೇಕು ಎನ್ನುವಂತಿತ್ತು ಅವನ ಮಾತಿನ ಧಾಟಿ. "ಮುಂದಿನ ಸಲ ಬನ್ನಿ ಸರ್. ಸ್ಕೇರ್ಲೆಟ್ ಫಿಂಚ್ ತೋರಿಸುತ್ತೇನೆ" ಎಂದ. ಅವನು ಹೇಳಿದ ಮತ್ತೊಂದು ಕಡುಕಷ್ಟದ ಪ್ರಯಾಣಕ್ಕೆ, ಹಿಮಪಾತದ ಮಂಡಲ್, ಚೋಪ್ತಾ ಎಂಬ ಕಡು ಶೀತದ ನಾಡಿಗೆ ಹೋಗುವ ಗಳಿಗೆ ಇನ್ನೂ ಕೂಡಿ ಬಂದಿಲ್ಲ. ಪುಟಾಣಿ ಗುಬ್ಬಿ ಗಾತ್ರದ ರಕ್ತವರ್ಣದ ಚೆಲುವಿನ ಸ್ಕೇರ್ಲೆಟ್ ಫಿಂಚ್ ಎಂಬ ಕೆಂಗನಸು ಈಗಲೂ ನನಗಾಗಿ ಅಲ್ಲಿ ಕಾಯುತ್ತಿದೆ. ●